ಈ ಮೆಟ್ಟಿಲುಗಳನ್ನು ಹತ್ತಿ ಹೋದ ಮೇಲೆ ಒಂದು ಕಲ್ಲಿನ ಹೆಬ್ಬಂಡೆಯಂತಹ ರಚನೆ ಕಾಣುತ್ತದೆ. ಇದನ್ನು ಸುತ್ತುವರಿದುಕೊಂಡು ಹೋದರೆ ಒಂದು ನೀರಿಗಾಗಿ ಕಟ್ಟಿದ ತೊಟ್ಟಿ ಕಾಣುತ್ತದೆ. ಇಲ್ಲಿ ಮುಂಚೆ 18 ತೊಟ್ಟಿಗಳು ಮತ್ತು ಕೊಳಗಳಿದ್ದರೂ ಈಗ ಉಳಿದಿದ್ದು ಬರೀ ಮೂರು ಮಾತ್ರ. ಅವುಗಳಲ್ಲಿ ಇನ್ನೂ ನೀರಿನ ಸಂಗ್ರಹವಿದೆ. ಇಲ್ಲಿಂದ ಕಿಲ್ಲೆಯ ರಚನೆ ಸ್ಪಷ್ಟವಾಗಿ ಕಾಣಬಹುದು.

ಮೇಲೆ ಜನವಸತಿಯಿಲ್ಲ. ಶೇರ್ ವಾಡಿಯ ಎಂಬ ಪಾರಸಿಯು ಒಬ್ಬನೇ ಅಲ್ಲಿ ಕಳೆದ 25 ವರ್ಷಗಳಿಂದ ವಾಸವಾಗಿದ್ದಾನೆ. ಈತನ ಜೀವನಶೈಲಿ ವಿಚಿತ್ರವಾಗಿದೆ. ಮನೆಯಲ್ಲಿಯೇ ಸೈಕಲ್ ತುಳಿದು ವಿದ್ಯುತ್ ಉತ್ಪಾದಿಸುವ ವಿಧಾನವನ್ನು ಆತ ಕಂಡುಕೊಂಡಿದ್ದಾನೆ. ಬೆಟ್ಟದ ಕೆಳಗಿನ ಜನ, ಈತ ಯಾರ ಜೊತೆಗೂ ಸೇರುವುದಿಲ್ಲವೆಂದು ಹೇಳುತ್ತಾರೆ. ಆದರೆ ಆತ ನಮಗೆ ಮೇಲೆ ತಲುಪುವ ಹಾದಿಯನ್ನು ತೋರಿಸಿದನು. ಈ ಕೋಟೆಯನ್ನು 1983 ರಲ್ಲಿ ನಡೆದ ಹರಾಜಿನಲ್ಲಿ ಕೊಂಡುಕೊಂಡೆನೆಂದು ಈತ ಹೇಳುತ್ತಾನೆ. ಈಗ ಈ ಕೋಟೆ ಮ್ಯಾಪ್‌ಕೋ ಎಂಬ ಸಂಸ್ಥೆಯ ಸ್ವತ್ತು, ತಾನು ಕೇರ್ ಟೇಕರ್ ಮಾತ್ರ ಎಂದು ಹೇಳಿದ. ಆತನ ಮನೆಯ ಹೊರಗೆ ಇಲ್ಲಿ ಕುಡಿತಕ್ಕೆ ಮತ್ತು ಡ್ರಗ್ಸ್ ಸೇವನೆಗೆ ಅವಕಾಶವಿಲ್ಲ ಎಂದು ಬರೆಯಲಾಗಿದೆ. ಅಂತೆಯೇ ಅಲ್ಲಿ ಗದ್ದಲಕ್ಕೂ ಅವಕಾಶವಿಲ್ಲ. ಜನಜಂಗುಳಿ ಯಿಂದ ದೂರ ಬೈರಾಗಿಯಂತೆ ಈತ ಈ ಬೆಟ್ಟದ ಮೇಲೆ ವಾಸಿಸುತ್ತಿದ್ದಾನೆ. ಪಾಂಡುಜಾಯಿ ದೇವಿ ಎಂಬ ದೇವತೆಯ ಮಂದಿರವೊಂದನ್ನು ಬಿಟ್ಟು ಬೆಟ್ಟದ ಮೇಲಿರುವ ಎಲ್ಲ ಕಟ್ಟಡಗಳೂ ಅವಶೇಷದ ಹಾದಿಯನ್ನು ಹಿಡಿದಿವೆ. ಇಲ್ಲಿ ಬಿದ್ದುಹೋದ ಒಂದು ಆಂಜನೇಯನ ದೇವಸ್ಥಾನವೂ ಇದೆ.

**ಐತಿಹಾಸಿಕ ಹಿನ್ನೆಲೆ:** ಕೋಲ್ಹಾಪುರದ ಶಿಲಾಹಾರ ವಂಶದ ರಾಜನಾದ ಎರಡನೆಯ ಭೋಜನ ಕಾಲದಲ್ಲಿ ಕಟ್ಟಲ್ಪಟ್ಟ ಕೋಟೆಯೆಂದು (1178–1193) ನಂತರ ಆದಿಲ್‌ಶಾಹಿಗಳ ವಶಕ್ಕೆ ಹೋಯಿತು. ಶಿವಾಜಿ ಮತ್ತು ಔರಂಗಜೇಬ್‌ನ ವಶದಲ್ಲಿಯೂ ಈ ಕೋಟೆ ಇತ್ತೆಂದು ಹೇಳುತ್ತಾರೆ. ಬೆಟ್ಟದ ಮೇಲೆ ಹೋಗಬೇಕೆಂದರೆ ನಿಮ್ಮ ಊಟದ ವ್ಯವಸ್ಥೆಯನ್ನು ನೀವೇ ಮಾಡಿಕೊಳ್ಳಬೇಕು. ಮೆನವಳಿಯಲ್ಲಿ ಊಟದ ಸೌಲಭ್ಯವಿದೆ. ಅಲ್ಲದೇ ವಾಯಿ ಯಲ್ಲಿಯೂ ನೀವು ಊಟ ಕಟ್ಟಿಸಿಕೊಂಡು ಹೋಗ ಬಹುದು. ಆದಷ್ಟುಮಟ್ಟಿಗೆ, ನಿಮ್ಮ ನೀರಿನ ವ್ಯವಸ್ಥೆಯನ್ನು ನೀವೇ ಮಾಡಿಕೊಳ್ಳುವುದು ಉತ್ತಮ.

ಮೇಲೆ ವಸತಿಯ ಸೌಕರ್ಯವಿಲ್ಲ ಹೆಚ್ಚೆಂದರೆ ಮೆನವಳಿಯ ದೇವಸ್ಥಾನದಲ್ಲಿ ನೀವು ಇರಬಹುದು. ಬೆಟ್ಟ ಹತ್ತಲು ಬೇಕಾಗುವ ಕಾಲಾವಧಿ ಎರಡು ಗಂಟೆಗಳು. ನೀವು ನುರಿತ ಚಾರಣಿಗರಾಗಿದ್ದರೆ, ಒಂದೂಕಾಲು ಗಂಟೆಯಲ್ಲಿ ಬೆಟ್ಟ ಹತ್ತಬಹುದು. ನನ್ನ ತೂಕದ ಶರೀರ ಹೊತ್ತುಕೊಂಡು ಅಲ್ಲಲ್ಲಿ ಕುಳಿತುಕೊಳ್ಳುತ್ತ ನಾನು ಬೆಟ್ಟವೇರಲು ತೆಗೆದುಕೊಂಡ ಸಮಯ 2.30 ಗಂಟೆಗಳು. ಅನನ್ಯ ಮತ್ತು ವಿನಾಯಕ್ ಸರ ಸರ ಬೆಟ್ಟ ಹತ್ತುತ್ತಿದ್ದರು.





ಜ್ಞಾನೇಶನು ಅಲ್ಲಿ ರಗ್ಡ ಪುರಿಯನ್ನು ತಯಾರಿಸಿಕೊಂಡು ಬಂದಿದ್ದ. ಆತನ ಹತ್ತಿರ ಮೇಣದಿಂದ ಉರಿಯುವ ಪುಟ್ಟ ಸ್ಟೋವ್ ಒಂದಿತ್ತು ಅದರಲ್ಲೇ ನಾವು ಒಯ್ದ ಅಡಿಗೆಯನ್ನು ಬಿಸಿ ಮಾಡಿಕೊಂಡು ಊಟ ಮಾಡಿದೆವು. ಆಯಾಸಪಟ್ಟು ಹತ್ತಿದ ನಮಗೆ ಹೊಟ್ಟೆ ತುಂಬಾ ಊಟ ಮಾಡಿ ಬೆಟ್ಟದ ಮೇಲೆ ಸಮಯ ಕಳೆದಿದ್ದೇ ತಿಳಿಯಲಿಲ್ಲ. ನಂತರ ಎಲ್ಲರೂ ಬೆಟ್ಟವನ್ನು ಇಳಿದು, ಮೆನವಳಿಯ ಮಾರ್ಗವಾಗಿ ವಾಯಿಯನ್ನು ತಲುಪಿ, ಅಲ್ಲಿಂದ ರಾತ್ರಿ 8 ಗಂಟೆಗೆ ಪುಣೆಯನ್ನು ತಲುಪಿದೆವು.

ನೀವು ಲೇಖನ ಓದಿ ಬೆಟ್ಟದ ಮೇಲೆ ವಿಶೇಷವೇನೂ ಇಲ್ಲದಿದ್ದರೆ ಯಾಕೆ ಹೋಗಬೇಕೆಂದುಕೊಳ್ಳಬಹುದು. ಮತ್ತೇನಿಲ್ಲದಿದ್ದರೂ ಚಾರಣದ ಆನಂದ ನಿಮಗೆ ಸಿಗುವುದು ಖಂಡಿತ.

ಮನಾಲಿಯನ್ನು ಸಂಪರ್ಕಿಸಬೇಕೆಂದಿದ್ದರೆ ಅವಳ ಈ–ಮೇಲ್ ವಿಳಾಸ:
events@trekdi.com